ಸೆಪ್ಟಂಬರ್	4ರಲ್ಲು	.. .. ..	ಅನಂತ ಚತುರ್ದಶಿ.
ಡಿಟೋ	19ರಲ್ಲು	.. .. ..	ಮಹಾಲಯ ಅಮಾವಾಸ್ಯೆ.
ಡಿಟೋ	20ರಲ್ಲು	.. .. ..	ನವರಾತ್ರಿ ಆರಂಭ.
ಡಿಟೋ	29ರಲ್ಲು	.. .. ..	ವಿಜಯ ದಶಮಿ.
ಅಕ್ಟೋಬರ್	17ರಲ್ಲು	.. .. ..	ದೀಪಾವಳಿ.
ಡಿಸಂಬರ್	24ರ ಮೊದಲು 31ರ ವರಿಗೆ ಉಭಯ ದಿನಗಳೂ ಸೇರಿ	..	ಕ್ರಿಸ್ಮಸ್ ರಜಾಗಳು.

ಪರಾ—ಸಂವತ್ಸರದಲ್ಲಿನ ತಮಾಂ ಭಾನುವಾರಗಳೂ. ಪೊಂಗಲ್ ಹಬ್ಬದ ಎರಡನೇ ದಿನ, ಶ್ರೀಮ್ಮ ಮಹಾರಾಜರವರ ವರ್ಷ ವರ್ಧಂತಿ, ಗಣೇಶನ ಚೌತಿ, ಮಹಾನವಮಿ, ಬಲಪಾಡ್ಯಮಿ, ಪ್ರಿನ್ಸಾಫ್ ವೇಲ್ಸ್‌ರವರ ವರ್ಷ ವರ್ಧಂತಿ, ಯಿವು ಭಾನುವಾರಗಳಲ್ಲಿ ಪ್ರಾಪ್ತವಾಗುವದರಿಂದ ಅವುಗಳು ಬಿಡಲ್ಪಟ್ಟಿವೆ. ಅರ್ಸ್ಕೆರ್ಷಡೇ, ಚಕ್ರವರ್ತಿನಿಯವರ ವರ್ಷ ವರ್ಧಂತಿ, ಯಿವು ಕೋರ್ಟು ಬರ್ಖಾಸ್ತು ದಿನಗಳಲ್ಲಿ ಪ್ರಾಪ್ತವಾಗುವದರಿಂದ ಅವುಗಳೂ ಬಿಡಲ್ಪಟ್ಟಿವೆ.

ಬಿ. ಜೋಜೀಬ್ ಹುಕ್ಕುಂ,
ಎಸ್. ಹೆಮಾಜೀರಾವ್,
ರಿಜಿಸ್ಟ್ರಾರ್.

ಫಿನ್ಯಾನ್ಷಿಯಲ್ ಇಲಾಖಾ.

1882ನೇ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಗೆ, ಪರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ್ದ ಮೆಸ್ಸರ್ಸ್ ಕೌಟ್ಸ್ ಅಂಡ್ ಕೋಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎರ್ಫೇನ್ಸಮೆಂಟ್ ಯಾನೇ ಪರಾ ಬಗ್ಗೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎರ್ಫೇನ್ಸಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸರ್ನ್,
ಕಾಂಪ್ಟ್ರೋಲರ್.

ಅಂಚೇ ಇಲಾಖಾ.

ನಂ. 423—219. ತಾರೀಖು 20ನೇ ಡಿಸಂಬರ್ 1883.

ಇದರಿಂದ ಸಕಲ ಜನಗಳಿಗೂ ತಿಳಿಯುವ ಬಗ್ಗೆ ಪ್ರಕಟಿಸಲ್ಪಡುವದೇನಂದರೆ, ಮೈಸೂರು ಮಹಾರಾಜ ರಾಜಾ ಸಾಹೆಬ್ ಬಹದೂರವರ ದೀವಾನರವರ ಅಪ್ಪಣೆ ಅನುಸರಿಸಿ ಈ ಕೆಳಗೆ ಕಂಡ ಸ್ಥಳಗಳೊಳಗೆ ಹೋಬಳಿ ಅಂಚೆ ಆಫಿಸುಗಳು ಸ್ಥಾಪಿಸಲ್ಪಟ್ಟಿರುತ್ತವೆ.

ತಾಲ್ಲೂಕು.	ಅಂಚೆ ಆಫಿಸು ಸ್ಥಾಪಿಸಲ್ಪಟ್ಟ ಸ್ಥಳಗಳ ಹೆಸರು.
ಮಂಜರಾಬಾದ್ ..	ಶುಕ್ರವಾರಸಂತೆ
ಯೆಡತೊರೆ ..	ರುದ್ರಾಪಟ್ಟಣ

ತಾಲ್ಲೂಕು	ಅಂಚೇ ಆಫಿಸ್ ಸ್ಥಾಪಿಸಲ್ಪಟ್ಟ ಸ್ಥಳಗಳ ಹೆಸರು.
ಅತ್ತಿಕುಪ್ಪ	ಕೆಂದಘಟ್ಟ
ಅರಸೀಕೆರೆ	ಬಾಗಡಿ
ಮೂಡಿಗೆರೆ	ಬೆಂಣಕಲ್ಲು
ತಿಪಟೂರು	ಹಾಲ್‌ಕುರಿಕೆ
ಮಂಡ್ಯ	ಬಸರಾಳು
ಚಾಮರಾಜನಗರ	ವೆಡಿಗಾಲ

ಬಿ. ಮರಿಗಂಗಯ್ಯ,
ಅಂಚೇ ಬಕ್ಷಿ.

ಫಾರೆಸ್ಟ್ ಇಲಾಖಾ.

ತಾರೀಖು 24ನೇ ಡಿಶಂಬರ್ 1883.

ಇದರಿಂದ ತಿಳಿಸಲ್ಪಡುವದೇನಂದರೆ, ಇದರಡಿ ಕಂಡ ಪ್ಲಾಂಟೇರ್ಸ್‌ಗಳು—1884ನೇ ಇಸವೀ ಫಿಬ್ರವರೀ 1ನೇ ಮಕ್ತುಂ ಲಗಾಯತ್ ಮೇ 31ರವರಿಗೆ ಬಿಸಿಲುಕಾಲದ ಬಗ್ಗೆ ಬಂದು ಮಾಡಲ್ಪಟ್ಟಿರುತ್ತೆ, ಕಂಟ್ರೇಕ್ಟರು, ಇಂಜಾರ್ಜ್ ಫಾರೆಸ್ಟ್ ಪ್ರೊಟೆಕ್ಷನರವರ ಅಪ್ಪಣೆ ಹೊರತು ಈ ಜಂಗ್ಲೀಗಳಲ್ಲಿ ಪ್ರವೇಶಿಸಕೂಡದು.

ಜಂಗ್ಲೀಗಳು.		ತಾಲ್ಲೂಕು.
ಕಾಡುಗೋಡಿ		ಹೊಸಕೋಟೆ
ಜಡಿಗನಹಳ್ಳಿ	(ಹಳೇದು ಮತ್ತು ಹೊಸದು)	ಡಿಟೋ
ನೆಲಾಲ್	(A B ಮತ್ತು C)	ಡಿಟೋ
ತಾತನೂರು		ಡಿಟೋ
ಅಪ್ಪಸಂದ್ರ		ಡಿಟೋ
ದೊಡ್ಡಹರಡಿ		ಡಿಟೋ
ಚಿಕ್ಕಹರಡಿ		ಡಿಟೋ
ಕುರಾಂಡಹಳ್ಳಿ	(ಹಳೇದು ಮತ್ತು ಹೊಸದು)	ಮಾಲೂರು
ಮಾರಸಂದ್ರ		ಡಿಟೋ
ರಾಮಚಂದ್ರಪುರ	(A ಮತ್ತು B)	ಡಿಟೋ
ಜಂಗಂಕೋಟೆ		ಸಿಡ್ಲಘಟ್ಟ
ಏನೂರು		ಬೆಂಗಳೂರು

ಕೆ. ಪ್ರಹ್ಲಾದರಾವ್,
ಪ್ಲಾಂಟೇರ್ಸ್ ಇಂಜಾರ್ಜ್ ಫಾರೆಸ್ಟ್ ಪ್ರೊಟೆಕ್ಷನರ್.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟಿನಲ್ಲಿ.

1883ನೇ ಇಸವಿ ಅರ್ಜೀ ನಂಬರ್ 524.

ಮೃತಪಟ್ಟ ರಾಮಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಮರಿಯಕ್ಕಂಮ್ಮ, ಮೃತಪಟ್ಟ ಸದರೀ ರಾಮಯ್ಯನಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಹುಣಸೂರು-ತಾಲ್ಲೂಕು ಬೆಟ್ಟದಪುರ ಕಸಬಾ ಸ್ಥಳದ ಮರಿಯಮ್ಮನು, ಸದರೀ ವಾಗಸ್ಥನಾಗಿ ಮೃತಪಟ್ಟ ರಾಮಯ್ಯನ ಜಿಂದಗೀ ಬಗ್ಯಾಗಿ ಬರತಕ್ಕ 800 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.